CW-03
PW-04

**<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.</u>**

ಸ್ಪೇಷಲ್ .ಕೇಸ್(ಎಸ್.ಸಿ./ಎಸ್.ಟಿ.) ಸಂಖ್ಯೆ 488/2024

ದಿ. 08-07-2026

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-06
ಪ್ರಾಸಾ-04

**<u>ಪಾಟೀ ಸವಾಲು ಶ್ರೀ ಎಸ್.ಜಿ.ಕೆ. ವಕೀಲರಿಂದ ಆರೋಪಿತರ ಪರः</u>**

12. ಚಾಸಾ-10 ಅನಿಲಕುಮಾರ ನನಗೆ ಅಣ್ಣನಾಗಬೇಕು. ಚಾಸಾ-2 ಮರಿಯಣ್ಣ ನನ್ನ ದೊಡ್ಡಪ್ಪ. ನ್ಯಾಯ ಬೆಲೆ ಅಂಗಡಿಯಲ್ಲಿ ನನಗೆ ಕೆಲಸ ಮಾಡಲು ಚಾಸಾ-2 ರವರು ಸಂಬಳ ನೀಡುತ್ತಿದ್ದರು. ಸದರಿ ನ್ಯಾಯ ಬೆಲೆ ಅಂಗಡಿಯಲ್ಲಿ ನಾನು ಕೆಲಸ ಮಾಡುವ ಸಂಬಂಧ ನಾನು ಸಹಿ ಹಾಕುತ್ತಿರಲಿಲ್ಲ. ಚಾಸಾ-2 ಮರಿಣಯಣ್ಣನವರು ಹೀರೆಬೂದುರು ನ್ಯಾಯ ಬೆಲೆ ಅಂಗಡಿಯಲ್ಲಿ ಪಡಿತರ ಸರಿಯಾಗಿ ವಿತರಣೆ ಮಾಡುತ್ತಿಲ್ಲ ಎಂದು ದೂರು ನೀಡಿದ್ದರು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಆದ್ದರಿಂದಲೇ ಅವರ ನ್ಯಾಯ ಬೆಲೆ ಅಂಗಡಿಯ ಪರವಾನಿಗೆ ರದ್ದಾಗಿರುತ್ತದೆ ಎಂದರೆ ಸಾಕ್ಷಿ ನಾವು ಅಂಗಡಿಯನ್ನು ಸರಿಯಾಗಿ ನಡೆಸುತ್ತಿದ್ದೆವು ಊರಿನ 8-10 ಜನ ದೂರು ನೀಡಿದ್ದರಿಂದ ಪರವಾನಿಗೆ ರದ್ದಾಗಿದ್ದು ನಿಜ ಎನ್ನುತ್ತಾರೆ. ಆ ರೀತಿ ಪರವಾನಿಗೆ ರದ್ದಾಗಿದ್ದರಿಂದಲೇ ನಾವೆಲ್ಲಾ ಶಾಮೀಲಾಗಿ ಆರೋಪಿಗಳ ವಿರುದ್ದ ಈ ಕ್ರಿಮಿನಲ್ ಪ್ರಕರಣದ ದಾಖಲು ಮಾಡಿಸಿದ್ದೆವೆ ಎನ್ನುವುದು ಸರಿಯಲ್ಲ. ಚಾಸಾ-2 ರವರ ವಿರುದ್ಧ ಆಹಾರ ಇಲಾಖೆಗೆ ದೂರು

CW-03
PW-04

ನೀಡಲು ಆರೋಪಿಗಳೇ ಮುಂದಾಳತ್ವ ವಹಿಸಿದ್ದರು ಎನ್ನುವುದು ನಿಜ. ದಿಃ 25-07-2024 ರಂದು ಹೀರೆಬೂದೂರು ಗ್ರಾಮದಲ್ಲಿ ಪಡಿತರ ವಿತರಣೆ ಮಾಡಿದ ಸಂಬಂಧ ದಾಖಲೆ ಇದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪಡಿತರ ವಿತರಣೆ ಮಾಡುವ ಸಮಯದಲ್ಲಿ ಗ್ರಾಹಕರ ಹೆಬ್ಬೆಟ್ಟಿನ ಅಚ್ಚು ಪಡೆದುಕೊಂಡು ಓಟಿಪಿ ಬಂದ ನಂತರ ಪಡಿತರ ವಿತರಣೆ ಮಾಡುವ ಪ್ರಕ್ರಿಯೇ ಇದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಿಃ 25-07-2024 ರಂದು ನಾನು ಇದೆ ಹೀರೆಬೂದೂರು ಗ್ರಾಮಕ್ಕೆ ಹೋಗಿರುವುದೇ ಇಲ್ಲ ಎನ್ನುವುದು ಸರಿಯಲ್ಲ. ನಾನು ಮುಖ್ಯ ವಿಚಾರಣೆ ಕಂಡಿಕೆ 3 ಮತ್ತು 5 ರಿಂದ 11 ರವರೆಗೆ ಹೇಳಿರುವ ವಿಚಾರಗಳೆಲ್ಲವೂ ಸುಳ್ಳು ಎನ್ನುವುದು ಸರಿಯಲ್ಲ. ದಿಃ 25-07-2024 ರಂದು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಘಟನೆ ನಡೆದಿಲ್ಲವಾದರೂ ಸಹ ನಿಮ್ಮ ದೊಡ್ಡಪ್ಪ ಚಾಸಾ-2 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಮಾಲ ಎನ್.ಡಿ.)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.